ಅ) ಕಳೆದ ಬಾರಿ ಸೆಪ್ಟೆಂಬರ್ 93 ರಲ್ಲಿ ಈ ಜಲಾಶಯವು ಭರ್ತಿಯಾಗಿದ್ದಿತು.

ಇ) 1995-96 ನೇ ಸಾಲಿನಲ್ಲಿ ಜಲಾಶಯಕ್ಕೆ 825 ದಶಲಕ್ಷ ಘನ ಅಡಿಯಷ್ಟು ಮಾತ್ರ ನೀರು ಹರಿದು ಬಂದಿರುತ್ತದೆ.

ಈ) ಈಗ ಜಲಾಶಯದ ಹಾಲಿ ನೀರಿನ ಮಟ್ಟವು 8 ಅಡಿಗಳು (ಅಂದರೆ 2508 ಅಡಿ ಸಮುದ್ರ ಮಟ್ಟದಿಂದ) ಮಾತ್ರ ಇರುತ್ತದೆ. (ದಿ : 20-7-1996)

ಉ) ಈಗಿರುವ ನೀರಿನ ಶೇಖರಣೆಯಿಂದ 1996 ಆಗಸ್ಟ್ 31 ರವರೆಗೆ ಕಡಿಮೆ ಪಂಪಿಂಗ್‌ನಲ್ಲಿ ನಗರಕ್ಕೆ ನೀರನ್ನು ಪೂರೈಕೆ ಮಾಡಬಹುದು.

ಊ) ಕಾವೇರಿ ನೀರನ್ನು ಬೆಂಗಳೂರಿನ ಉತ್ತರ ಹಾಗೂ ಪಶ್ಚಿಮ ಭಾಗಗಳಿಗೆ ವಿಸ್ತರಿಸಲಾಗುವುದು. ಇದಲ್ಲದೆ, ನೀರನ್ನು ಅಧಿಕ ಸಂಖ್ಯೆಯಲ್ಲಿ ನೀರಿನ ಟ್ಯಾಂಕರ್‌ಗಳ ಮೂಲಕ ಅಭಾವ ಪೀಡಿತ ಪ್ರದೇಶಗಳಿಗೆ ನೀರು ಸರಬರಾಜು ಮಾಡಲಾಗುವುದು. ಇದಲ್ಲದೆ ನಗರದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿರುವ 2500 ಕೊಳವೆ ಬಾವಿಗಳಿಂದಲೂ ನೀರಿನ ಪೂರಕ ವ್ಯವಸ್ಥೆಯನ್ನು ಮಾಡಲಾಗುವುದು.

ವಿಷಯ :– ಬೆಂಗಳೂರು ನಗರದ ಸಂಚಾರಿ ಪೋಲೀಸ್ ಸಿಬ್ಬಂದಿ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 971 (777)

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿರುವ ಸಂಚಾರಿ ಪೋಲೀಸ್ ಸಿಬ್ಬಂದಿ ಸಂಖ್ಯೆ ಎಷ್ಟು (ವಿವರ ನೀಡುವುದು) ;

ಆ) ಬೆಳೆಯುತ್ತಿರುವ ನಗರದಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರದ ಕಾರಣ ದಿಂದ ಈಗ ಇರುವ ಸಿಬ್ಬಂದಿ ಸಾಕಾಗುವುದೇ ;

ಇ) ಈಗ ಅಗತ್ಯವಿರುವ ಹೆಚ್ಚಿನ ಸಿಬ್ಬಂದಿ ಸಂಖ್ಯೆ ಎಷ್ಟು ;

ಈ) ಈ ಅಗತ್ಯವನ್ನು ಎಂದು ಪೂರೈಸಲಾಗುವುದು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-

ಅ) ಬೆಂಗಳೂರು ನಗರದಲ್ಲಿರುವ ಸಂಚಾರಿ ಪೋಲೀಸ್ ಸಿಬ್ಬಂದಿ ಸಂಖ್ಯೆ ವಿವರಗಳು ಈ ಕೆಳಕಂಡಂತಿದೆ.

1)	ಡಿ.ಸಿ.ಪಿ. (ಎಸ್.ಪಿ)	1	ಹುದ್ದೆ
2)	ಎ.ಸಿ.ಪಿ. (ಡಿ.ಎಸ್.ಪಿ)	6	ಹುದ್ದೆಗಳು
3)	ಪೋಲೀಸ್ ಇನ್ಸ್‌ಪೆಕ್ಟರ್	19	"
4)	ಪೋಲೀಸ್ ಸಬ್-ಇನ್ಸ್‌ಪೆಕ್ಟರ್	87	"
5)	ಸಹಾಯಕ ಸಬ್-ಇನ್ಸ್‌ಪೆಕ್ಟರ್	63	"
6)	ಹೆಡ್ ಕಾನ್ಸ್‌ಟೇಬಲ್	247	"
7)	ಪೋಲೀಸ್ ಕಾನ್ಸ್‌ಟೇಬಲ್	1120	"

ಆ) ಇಲ್ಲ

ಇ)

	ಪೋಲೀಸ್ ಇನ್ಸ್‌ಪೆಕ್ಟರ್	-	14
	ಪೋಲೀಸ್ ಸಬ್-ಇನ್ಸ್‌ಪೆಕ್ಟರ್	-	51
	ಸಹಾಯಕ ಪೋಲೀಸ್ ಸಬ್-ಇನ್ಸ್‌ಪೆಕ್ಟರ್	-	103
	ಹೆಡ್ ಕಾನ್ಸ್‌ಟೇಬಲ್	-	113
	ಪೋಲೀಸ್ ಕಾನ್ಸ್‌ಟೇಬಲ್	-	493
	ಎ.ಹೆಚ್.ಸಿ. (ಚಾಲಕ)	-	1
	ಎ.ಪಿ.ಸಿ. (ಚಾಲಕ)	-	21

ಈ) 1995-96 ರಲ್ಲಿ ಸಂಚಾರಿ ಪೋಲೀಸ್ ಬಲವನ್ನು ಈ ರೀತಿ ಹೆಚ್ಚಿಸಲಾಗಿದೆ.

1.	ಪೋಲೀಸ್ ಇನ್ಸ್‌ಪೆಕ್ಟರ್	-	5
2.	ಪೋಲೀಸ್ ಸಬ್-ಇನ್ಸ್‌ಪೆಕ್ಟರ್	-	48
3.	ಪೋಲೀಸ್ ಕಾನ್ಸ್‌ಟೇಬಲ್	-	370